


ಅನ್ನುವಂಗ ಕಮಾನೊಂದು ಕಟ್ಟಿಸಿಬಿಡ್ರೀ' ಎಂದು ಜೋರಿಲೇ ಊರಿಗೂರಾ ಕಿತ್ ಒದರಿತ್ತು. ಅಕ್ಕಪಕ್ಕದ ಊರುಗಳಲ್ಲಿರುವುದು ತಮ್ಮೂರಲ್ಲಿಲ್ಲ ಎಂಬ ಕೊರಗು ಅವರದು. ರೋಡ್ ಮ್ಯಾಗ್ ಡಾಂಬರು, ಊರೊಳಗ ದವಾಖಾನೆ, ಕಲಿಯೋ ಹುಡುಗರಿಗೆ ಇನ್ನೊಂದು ಸಾಲಿಖೋಲಿ, ಕುಡಿಯಾಕ್ ನಾಕ್ ಬಗಸಿ ನೀರು ಇಂತಹ ಹೆಚ್ಚು ಖರ್ಚಿನ ವಿಚಾರ ಕೇಳಲಿಲ್ಲವೆಂದು ನೆಮ್ಮದಿಯ ನಿಟ್ಟುಸಿರುಬಿಟ್ಟ ಸಾಹೇಬ, ಅಂದುಕೊಂಡಿದ್ದಕಿಂತ ಹೆಚ್ಚು ಉಳಿತಾಯಗೊಂಡಿದ್ದು ಅರಿವಾಗಿ ಖುಷಿಯ ಬುಗ್ಗೆ ಆತನ ಮುಖದಲ್ಲಿರಳಿತು. ಅದೇ ಖುಷಿಯೊಳಗ 'ಊರಾಗಿನ ಬಸವಂದೇವರ ಆಣೆಗೂ ಊರ ದ್ವಾರಬಾಗಿಲ ಕಟ್ಟಿಸೇ ತೀರ್ತೀನಿ, ಇದಲ್ದ ಬಸಪ್ಪನ ಗುಡಿ ಜೀರ್ಣೋದ್ಧಾರಕ್ಕ ಎರಡು ಲಕ್ಷ ಕೊಡ್ತೀನಿ' ಎಂದಾಗ ಮುಂದನಿಂತ ಮಂದಿ ಖುಷಿಖುಷಿಲೇ ಕ್ಯಾಖಿ ಹೊಡೆದಿತ್ತು. ಮಂದಿಯ 'ಕೇಹೋ' ಕ್ಯಾಖಿ ಧ್ವನಿ ದೂರಿದ್ದ ನಾಕ್ ಮಂದಿ ಕಿವಿಗ್ ಬೀಳೋದ್ರಾಗ ದೂರ ಕುಂತ ಕೇರಿಮಂದಿ ಬುಸುಗುಡಾಕ ಹತ್ತಿದ್ರು. ಎಲೆಕ್ಷನ್ನೂ ಮುಂಚೆ ಗೆದ್ ಬಂದ್ರ ದುರಗವ್ವನ ಗುಡಿ ಬಿಚ್ಚಿ ಕಟ್ಟಿಸೋದು ನನ್ನ ಜವಾಬ್ದಾರಿ ಅಂತ ಭಾಷಣ ಹೊಡದು ಈಗ ಬಗಲೆತ್ತಿ ಹೋಗಿದ್ದ. ಕೇರಿಯೆಲ್ಲ ಕುಂತ ಮೆಟ್ಟೇದಾಗ ಬುಸುಗುಡಾಕಹತ್ತಿತ್ತು. ಕೇರಿಮಂದಿ ಮಾತು ಸಾಹೇಬಗ ಮುಟ್ಟೋದೆಲ್ಲಿ, ವಿಜಯೋತ್ಸವ ಸಾಗಿತು.

ಬೆಂಕಿ ಆರಲಿಲ್ಲ. 'ನಮ್ ದೇವ್ರಂದ್ರ ಎಮ್ಮೆಲೆ ಸಾಹೇಬ್ರಿಗಾತೂ, ಅವರ ಮಂದೀಗಾತೂ ಕಣ್ಣಿಗೆ ಕಾಣಲ್ಲನೂ. ಒಂದು ಬಿಲ್ಲೀನಾದ್ರೂ ನಂ ಕಡೆ ತೂರಿದ್ನಾ ಆ ಯಬರೇಸಿ, ವೋಟ್ಗೋಸ್ಕರ ಕಂಡಕಂಡಾರ ಕಾಲಿಗೂ ಬಕಬಾರಲೇ ಬಿದ್ನಲಪ ಈ ಹುಚಗೇಂಡಿ, ಈಗೇನ್ ಕೈಯ್ಯಾಗ ಚಿಪ್ಪ ಕೊಟ್ಟು ಹೋದ್ನಲ, ರೊಕ್ಕ ಕೊಟ್ಟಿದ್ದು ಊರದ್ಯಾವ್ರು ಬಸಪ್ಪಗ ಇರಬಹುದು ಆದ್ರ